ಮಾನ್ಯ ಅಧ್ಯಕ್ಷರೆ, ಈ ಸದನದ ಮೂಲಕ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಈ ಕರ್ನಾಟಕ ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ (ಐ) ಪಕ್ಷವನ್ನು ಪಕ್ಷಾಂತರದ ಮೂಲಕ ಬಲಪಡಿಸುವ ಅವಶ್ಯಕತೆಯೇ ಇಲ್ಲ. ಇದು ಇಲ್ಲಿ ಮಾತ್ರ ಅಲ್ಲ, ಕೇಂದ್ರ ಸರ್ಕಾರದಲ್ಲೂ ಇಲ್ಲ.

(ಗೊಂದಲ)

ಪಕ್ಷಾಂತರದ ಮೂಲಕ ಅಧಿಕಾರಕ್ಕೆ ಬಂದಂಥ ಅಲ್ಪಸಂಖ್ಯಾತರ ಸರ್ಕಾರ ಇದು. ಇದು ಸಂಯುಕ್ತ ರಂಗದ ಸರ್ಕಾರ ಕೂಡ ಅಲ್ಲ. ಅವರು ಯಾವಾಗ ಬಿಟ್ಟು ಹೋಗುತ್ತಾರೋ ಅದೇ ಇವರಿಗೆ ಇನ್ನೂ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ತಾವು ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಬೇಕು, ಇನ್ನೂ ೫ ವರ್ಷ ಕಾಲ ಅಧಿಕಾರದಲ್ಲಿ ಉಳಿಯಬೇಕೆಂಬ ಒಂದೇ ಒಂದು ಆಸೆಯಿಂದ ಸಾರ್ವತ್ರಿಕವಾಗಿ ಪಕ್ಷಾಂತರವನ್ನು ಮಾಡಿಸತಕ್ಕ ಒಂದು ಫ್ಲಡ್ ಗೇಟ್‌ನ್ನು ಓಪನ್ ಮಾಡಿದಂಥ ಪಕ್ಷ ಎಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಜನತಾ ಪಕ್ಷ. ಇವರನ್ನು ಮಾತ್ರ ಮಾಸ್ಟರ್ ಆಫ್ ಡಿಫೆಕ್ಟರ್ಸ್ ಎಂದು ಕರೆಯಬಹುದು.

SRI MICHAEL B. FERNANDES.—Your party President is the mother of defections. ಅದು ನಿಮಗೆ ಗೊತ್ತಾ ?

(ಗೊಂದಲ)

ಉಪಾಧ್ಯಕ್ಷರು.—ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ರೀತಿ ಬೊಬ್ಬೆಯಾಟ ಮಾಡಿ ತಾವು ಮಾಡಿದಂಥ ಪಾಪದ ಬಿಂಡದ ದೊಡ್ಡ ಹೊರೆಯನ್ನು ನಮ್ಮ ಪಕ್ಷದ ಅಧ್ಯಕ್ಷರ ಮೇಲೆ ಹೊರಿಸುವ ಪ್ರಯತ್ನ ಮಾಡುತ್ತಿದ್ದೀರಿ. ನಮ್ಮ ಪಕ್ಷದ ಅಧ್ಯಕ್ಷರಾದ ಕೆ. ಜೆಟ್. ಪಾಟೀಲರವರಿಗೂ ಕೂಡ ಈ ರೀತಿಯ ಪಕ್ಷಾಂತರದಲ್ಲಿ ಆಸಕ್ತಿ ಇಲ್ಲ. ನಿಮ್ಮ ಸರ್ಕಾರವನ್ನು Topple ಮಾಡಿಸಿಕೊಳ್ಳಿತಕ್ಕ ಕೆಲಸವನ್ನು ನೀವೇ ಮಾಡಿಕೊಳ್ಳುತ್ತಿದ್ದೀರಿ. ಇವತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಗೌರವವನ್ನು ಕೊಡುತ್ತೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಸಡೆದುಕೊಂಡ ಸಡವಳಿಕೆ, ವಿರೋಧ ಪಕ್ಷದ ನಾಯಕರನ್ನು, ಮತ್ತು ವಿರೋಧ ಪಕ್ಷದ ಸದಸ್ಯರನ್ನೂ ಲಘುವಾಗಿ ಕಂಡು ಸಂಸದೀಯ ಪರಂಪರೆಗೆ ಯೋಗ್ಯವಲ್ಲದ ಮಾತನ್ನು ಹೇಳುವುದರ ಮೂಲಕ ಒಂದು ದೊಡ್ಡ ಕಲ್ಲಿಸಂದ ಪಿಟನ್ನು ಹಾಕಿದ ಹಾಗೆ ಮಾಡಿದ್ದಾರೆ. ಇಂಥ ಮಾತುಗಳನ್ನಾಡಿ ಇವರು ಇಡೀ ಸದನಕ್ಕೇ ಅಪಮಾನ ಮಾಡಿದ್ದಾರೆ. ಈ ವಿಚಾರದಲ್ಲಿ ನಾವು ನಮ್ಮ ಖಂಡನೆಯನ್ನು ವ್ಯಕ್ತಪಡಿಸಿ, ಮತ್ತು ಪ್ರತಿಭಟನೆಯನ್ನು ಸೂಚಿಸಿ ಸದನದಿಂದ ಹೊರಗೆ ಹೋಗುತ್ತಿದ್ದೇವೆ

(ವಿರೋಧ ಪಕ್ಷದ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಶ್ರೀ ಎ.ಎಂ. ಮರಿಯಪ್ಪ (ದೇವನಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೆ, ಇದು ಪ್ರಮಾಣ ವಚನವನ್ನು ಸ್ವೀಕರಿಸಿದಂಥ ಸ್ಥಳ. ಇಲ್ಲಿ ಸುಳ್ಳನ್ನು ಹೇಳಿದವರಿಗೆ ನಾಲಿಗೆ ಬಿದ್ದು ಹೋಗುತ್ತದೆ. ನಾನು ಬೌರಿಂಗ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾಗ ನಾಲ್ಕು ಕಾರುಗಳು ಬಂದವು. ಆ ನಾಲ್ಕು ಕಾರುಗಳಲ್ಲಿ ಕೆಲವು ಜನರು ನನ್ನ ಹತ್ತಿರ ಬಂದು ನಿನಗೆ ಸ್ವಾಭಿಮಾನವನ್ನು ಕೊಡುತ್ತೇವೆ; ಹಣವನ್ನು ಕೊಡುತ್ತೇವೆ, ಈಗ ೨೫ ಲಕ್ಷ ರೂ. ಕೊಡುತ್ತೇವೆ, ನೀವು ನಮ್ಮ ಪಕ್ಷಕ್ಕೆ ಬಂದುಬಿಡಿ ಎಂದು ಹೇಳಿದರು. ಅಲ್ಲಿರತಕ್ಕ ಸಿಸ್ಟರ್‌ಗಳ ಸಮೇತವಾಗಿ ನಾನು ಇದನ್ನು ಪ್ರೂವ್ ಮಾಡಿಕೊಡುತ್ತೇನೆ. ಇದಕ್ಕೆ ಆಧಾರವನ್ನು ಕೊಡುತ್ತೇನೆ. ಈ ವಿಚಾರ ಅಲ್ಲಿಂದ ಪ್ರಾರಂಭವಾಯಿತು. ಮತ್ತೆ ೨೦ ದಿವಸದ ನಂತರ ನನ್ನ ರೂಮಿನಲ್ಲಿ ಹಲ್ಲೆಯಾಯಿತು. ಅದಕ್ಕೆ ಆಧಾರವನ್ನು ಕೊಡುತ್ತೇನೆ. ಇವತ್ತು ಬೆಳಿಗ್ಗೆ ಕೂಡ ಸುಮಾರು ೭-೪೫ ಗಂಟೆ ಸಮಯದಲ್ಲಿ ನಮ್ಮ ಸ್ನೇಹಿತರಾದ, ನಮ್ಮ ಕಾರ್ಯಕರ್ತರನ್ನು ಕರೆಸಿಕೊಂಡು ಅಧಿಕಾರಿಗಳನ್ನು ಕೂರಿಸಿಕೊಂಡು ಕೇಳಿದಾಗ ಇವರು ನನ್ನವರೇ ಎಂದು ಹೇಳಿ ಅಧಿಕಾರಿಗಳ ಸಮ್ಮುಖದಲ್ಲಿ ಈ ಚರ್ಚೆ ನಡೆದಿದೆ. ನಿಮಗೆ ಹಣ ಬಂದು ಬಾಗಿಲು ತಟ್ಟುತ್ತಿದೆ, ಮರಿಯಪ್ಪನವರೇ ಇದನ್ನು ಮರೆಯಬೇಡಿ. ಇವತ್ತು ಸಾಯಂಕಾಲ ನೀವು ಬಂದು ಸೈನ್ ಹಾಕಿ ಹೋಗಿ ಎಂದು ಅವರು ಹೇಳಿದರು. ಆಮೇಲೆ ನಾನು ಹೇಳಿದೆ. ನನ್ನಂಥ ರಿಸರ್ವ್ ಕಾನ್‌ಸ್ಟಿಟ್ಯುಯೆನ್ಸಿಯ ಎಂ.ಎಲ್.ಎ. ಗಳು ಬಹಳ ಜನ ಇರಬಹುದು. ಆದರೆ ನಾನು ಅಂಥ ದ್ರೋಹವನ್ನು ಬಗೆಯಲು ಸಿದ್ಧವಿಲ್ಲ, ನನ್ನ ಕೊನೆಯ